## ಹರಕೆಯ ಗೊಂಬೆಗಳು

ಈ ಚಿತ್ರದಲ್ಲಿರುವುದು ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯ 'ಹಾದಿ ಮಾಸ್ತಿ ದೇವಸ್ಥಾನ'ದ ಹೊರಗಿನ ಮಾಸ್ತಿ ಗೊಂಬೆಗಳು. ಒಂದು ಅಡಿಯಿಂದ ಹಿಡಿದು ಐದು ಅಡಿಗೂ ಮಿಕ್ಕಿ ಎತ್ತರವಿರುವ ಈ ವಿವಿಧ ಅಳತೆಯ ಗೊಂಬೆಗಳನ್ನು ಈ ದೇವಾಲಯದ ಭಕ್ತರು ತಮ್ಮ ಶಕ್ತ್ಯಾನುಸಾರ ಸಲ್ಲಿಸುತ್ತಾರೆ. ಸಂತಾನಪ್ರಾಪ್ತಿ, ಇಷ್ಟಾರ್ಥಸಿದ್ಧಿ ಇತ್ಯಾದಿ ಕಾರಣಗಳಿಗಾಗಿ ಭಕ್ತರು ಈ ಗೊಂಬೆಗಳನ್ನು ಮಾಡಿಸಿ ಅಥವಾ ಅಂಗಡಿಯಲ್ಲಿ ಖರೀದಿಸಿ ಈ ದೇವಸ್ಥಾನಕ್ಕೆ ಸಲ್ಲಿಸುತ್ತಾರೆ. ದೇವಾಲಯದ ಒಳಗೆ ಸುಮಾರು ಐದು ಅಡಿ ಎತ್ತರದ ಕಲ್ಲಿನ ಮೂರ್ತಿ ಇದ್ದು, ಈ ಮಾಸ್ತಿಯ ಪೂಜೆಯನ್ನು ಇಲ್ಲಿ ಪುರೋಹಿತರು ದಿನವೂ ಮಾಡುತ್ತಾರೆ. ಈ ಮರದ ಗೊಂಬೆಗಳು ರಾಶಿಯಾದಾಗ, ಅರ್ಚಕರು ಈ ಮೂರ್ತಿಗಳನ್ನು ಶಾಸ್ತ್ರೋಕ್ತವಾಗಿ ವಿಸರ್ಜಿಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಎಲ್ಲ ಮಾಸ್ತಿ ದೇವಾಲಯಗಳಲ್ಲೂ ಇಂತಹ ಮರದ ಮಾಸ್ತಿ ಗೊಂಬೆಗಳನ್ನು ನೋಡಬಹುದಾಗಿದೆ.

ಚಿತ್ರ-ಬರಹ:
**ನಾರಾಯಣ ಯಾಜಿ, ಶಿರಾಲಿ**





## ಹಾರದ ಚಿಟ್ಟೆ

ಈ ಬಣ್ಣದ ಚಿಟ್ಟೆ ಹಾರುವುದಿಲ್ಲ. ಯಾಕೆಂದರೆ ಇದು ಕಲಾವಿದನಿಂದ ಸೃಷ್ಟಿಯಾದ ಗುಜರಿ ಚಿಟ್ಟೆ. ಇಳಕಲ್ಲಿನ ಬಸವರಾಜ ಸೂಳಿಕೇರಿ ಇದರ ರಚನೆಕಾರ. ಪೆಟ್ರೋಲ್ ಟ್ಯಾಂಕ್, ಬೈಕ್‌ನ ಹೆಡ್‌ಲೈಟ್, ಸೈಲೆನ್ಸರ್ ಪೈಪ್, ಜಾಳಿಗೆ ಮತ್ತು ಸಣ್ಣ ಕಬ್ಬಿಣದ ಸರಳುಗಳನ್ನು ಬಳಸಿ ರಚಿಸಿದ ಈ ಚಿಟ್ಟೆ ದಾವಣಗೆರೆಯ ಕಲಾ ಕಾಲೇಜಿನಲ್ಲಿ ನೋಡುಗರ ಮನ ಸೆಳೆಯುತ್ತಿದೆ.

**-ಎ.ಎಸ್. ಹೂಲಗೇರಿ, ಹುನಗುಂದ**

## ಕಾಷ್ಠ ಶಿಲ್ಪದ ಪರಾಕಷ್ಠೆ

ಹುಬ್ಬಳ್ಳಿಯ ಮೂರು ಸಾವಿರದ ಮಠಕ್ಕೆ ಭೇಟಿ ಕೊಟ್ಟಾಗ ಬರಿ ಮರಗಳಿಂದಲೇ ನಿರ್ಮಿಸಿದ ಕಟ್ಟಡ, ಅಲ್ಲಿಯ ಜಗಲಿಯ ಮೇಲೆ ಇಟ್ಟಿರುವ ಸ್ವಾಮಿಗಳ ಪೀಠ ಆಕರ್ಷಿಸಿದವು. ಇದರ ಕರ್ತೃ ಸಮಾಧಿಸ್ಥ ಶ್ರೀ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಮಹಾ ಶಿವಯೋಗಿಗಳು. ಕಾಲಮಾನ 12ನೇ ಶತಮಾನ, ಬಸವಣ್ಣನವರ ಕಾಲಮಾನ. ಈ ಪೀಠವನ್ನು ಸಾಗವಾನಿ ಮರದಲ್ಲಿ ಮಾಡಲಾಗಿದ್ದು, ಅತ್ಯಂತ ಸೂಕ್ಷ್ಮ ಕುಸುರಿ ಕೆಲಸದಿಂದ ಕೂಡಿದೆ. ಪಕ್ಕದ ದ್ವಾರ ಸಹ ಇದೇ ರೀತಿ ಮಾಡಲ್ಪಟ್ಟಿದೆ. ಮಠದ ಕಂಬಗಳು 30 ಅಡಿ ಎತ್ತರ, 8 ಅಡಿ ಸುತ್ತಳತೆ ಹೊಂದಿವೆ. ಅದ್ಭುತ ಸುಂದರ ಮಠವಿದು.

**-ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**

